

ಚಿತ್ರಪಟ ಕಥನ

ದಿನೇಶ್ ಮಾನೀರ್

# ಜಾತ್ರೆ ಮರುಳೋ ಚಿತ್ರ ಮರುಳೋ!

ಜಾತ್ರೆಗಳು ಜನಸಂಸ್ಕೃತಿಯ ಕಣ್ಣುಗಳು, ಸಮುದಾಯದ ಅಭಿವ್ಯಕ್ತಿಯ ಕ್ರಮಗಳೂ ಹೌದು. ‘ಜನ ಮರುಳೋ ಜಾತ್ರೆ ಮರುಳೋ’ ಎಂಬ ಮಾತನ್ನು ಮತ್ತೆ ಮತ್ತೆ ಆಡುತ್ತಲೇ ತೇರಿಗೆ ಹೋಗಿ ಮರುಳಾಗುವವರ ಸಂಖ್ಯೆ ಕಡಿಮೆಯಿಲ್ಲ. ವಿಶಿಷ್ಟ ಛಾಯಾಗ್ರಾಹಕ ದಿನೇಶ್ ಮಾನೀರ್ ಅವರೂ ಹಲವು ವರ್ಷಗಳಿಂದ ಕ್ಯಾಮೆರಾ ಹಿಡಿದು ಜಾತ್ರೆಗೆ ಮರುಳಾಗುತ್ತಲೇ ಇದ್ದಾರೆ. ಅವರ ಈ ಮರುಳು, ಕರ್ನಾಟಕದಲ್ಲಿನ ವಿವಿಧ ಜಾತ್ರೆಗಳನ್ನು, ಆಚರಣೆಗಳನ್ನು ದಾಖಲಿಸುವ ಬಹುಮಹತ್ವದ ಬಹುತ್ವದರ್ಶನವಾಗಿ ಫಲಕೊಡುತ್ತಿದೆ. ಈ ಜಾತ್ರಾಯಾತ್ರೆಯ ಚಿತ್ರಕಥನ, ಹೊಸ ವರ್ಷದ ಹೊಸ್ತಿಲಿನಲ್ಲಿರುವ ಸಹೃದಯರ ಖುಷಿ ಹೆಚ್ಚಿಸುವುದಂತೂ ಖಚಿತ.